**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ 47/2024**

ಪಿ.ಡಬ್ಲುಃ 10 ಸಿ.ಡಬ್ಲ್ಯುಃ13

| | | |
|---|---|---|
| ಸಾಕ್ಷಿಯ ಹೆಸರು | : | ಕವಿತಾ |
| ಗಂಡನ ಹೆಸರು | : | ಚನ್ನವೀರಪ್ಪ |
| ವಯಸ್ಸು | : | 35 ವರ್ಷಗಳು |
| ವೃತ್ತಿ | : | ಮನೆಗೆಲಸ |
| ವಾಸಸ್ಥಳ | : | ಎತ್ತಿನಬೂದಿಹಾಳ. |

**ಸತ್ಯಪ್ರತಿಜ್ಞೆ ಮಾಡಿದ ದಿನಾಂಕಃ 21.07.2026.**

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-**

**1)** ಚಾಸಾ-1 ನನ್ನ ಗಂಡನಾಗಬೇಕು. ನನಗೆ ಮೂರು ಜನ ಮಕ್ಕಳು. ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಇದ್ದಾರೆ. ಗಂಡು ಮಕ್ಕಳ ಹೆಸರು ವಿಜಯಕುಮಾರ ಮತ್ತು ಶರಣಬಸವ. ಹೆಣ್ಣು ಮಗಳ ಹೆಸರು ಪಾರ್ವತಿ. ನನಗೆ ಆರೋಪಿತರ ಪರಿಚಯವಿದೆ. ಅವರು ನಮ್ಮ ಊರಿನವರು.

**2)** ಈಗ ಸುಮಾರು 2 ವರ್ಷದ ಹಿಂದೆ ನನ್ನ ಮಗಳು ಪಾರ್ವತಿ ಮರಣ ಹೊಂದಿದ್ದಳು. ನನ್ನ ಮಗಳು ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ನನ್ನ ಮಗಳು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕಿಂತ ಮೂರು ದಿವಸ ಮೊದಲು ನಮ್ಮ ಊರಿನಲ್ಲಿ ಇದ್ದ ಪೆದ್ದಮ್ಮವ್ವ ದೇವಸ್ಥಾನಕ್ಕೆ ಹೋಗಿದ್ದಳು. ಚಾಸಾ-6, 7 ಮತ್ತು 12 ರವರು ದೇವಸ್ಥಾನಕ್ಕೆ ಹೋಗಿದ್ದ ನನ್ನ ಮಗಳನ್ನು ಆರೋಪಿತರು ಅಪರಹಣ ಮಾಡಿಕೊಂಡು ಹೋಗಿದ್ದರು ಎಂದು ತಿಳಿಸಿದ್ದರು. ನಾವು ನನ್ನ ಮಗಳನ್ನು ಎಲ್ಲಾ ಕಡೆ ಹುಡುಕಿದರು ಸಹ ಅವಳು ಸಿಗಲಿಲ್ಲ. ಬೆಳಗಿನ ಜಾವ 02.00 ಗಂಟೆ ಸಮಯದಲ್ಲಿ ನಾವು ಮನೆಯಲ್ಲಿ ಮಲಗಿದ್ದ ಸಮಯದಲ್ಲಿ ಮನೆಯ ಮುಂದೆ ಗಾಡಿಯ ಸಪ್ಪಳ ಕೇಳಿಸಿತ್ತು. ಆರೋಪಿತರು ನನ್ನ ಮಗಳನ್ನು ಮನೆಗೆ ಬಿಟ್ಟು ಹೋಗಿದ್ದರು. ನಾವು ನನ್ನ ಮಗಳನ್ನು ಏನಾಯಿತು ಎಂದು ವಿಚಾರಿಸಿದ್ದೆವು ಆದರೆ ನನ್ನ ಮಗಳು ನಮಗೆ ಏನನ್ನು ತಿಳಿಸಲಿಲ್ಲ.

3) ನನ್ನ ಮಗಳು ಸದರಿ ಘಟನೆಯಾದ ಎರಡು ದಿವಸಗಳ ಕಾಲ ಮನೆಯಿಂದ ಹೊರಗೆ ಹೋಗಿರಲಿಲ್ಲ. ನನ್ನ ಮಗಳು ಬಂದ 3 ದಿವಸ ಆದ ನಂತರ ನಾನು ಸಂಜೆ 4.30 ಗಂಟೆ ಸಮಯದಲ್ಲಿ ಮನೆಯ ಹೊರಗಡೆ ಕಸ ಹೊಡೆಯುತ್ತಿದ್ದೆ. ನನ್ನ ಮಗಳು ಸ್ನಾನ ಮಾಡಲು ಹೋಗಿದ್ದಳು. ಅಲ್ಲಿಯೇ ಅವಳು ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಳು. ನಾವು ಬಾತ್ ರೂಮಿನ ಬಾಗಿಲು ತೆಗೆಯಲು ಪ್ರಯತ್ನ ಪಟ್ಟೆವು. ಆದರೆ ಅದನ್ನು ತೆಗೆಯಲು ಆಗಲಿಲಿಲ್ಲ. ಬಾಗಿಲು ಹೊಡೆದು ಒಳಗೆ ಹೋಗಿ ನೋಡಿದಾಗ ನನ್ನ ಮಗಳಿಗೆ ಸುಟ್ಟ ಗಾಯಗಳು ಆಗಿದ್ದು ಕಂಡು ಬಂದಿತ್ತು. ನಂತರ ನಾವು ನನ್ನ ಮಗಳನ್ನು ಬಳ್ಳಾರಿಯ ಓ.ಪಿ.ಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದ್ದೆವು.

4) ಅಲ್ಲಿ ನನ್ನ ಮಗಳಿಗೆ ವೈದ್ಯರು ಉಪಚಾರ ಮಾಡಿದ್ದರು. ವೈದ್ಯಕೀಯ ಉಪಚಾರಕ್ಕೆ ಸ್ಪಂದಿಸದೆ ನನ್ನ ಮಗಳು ಬೆಳಗಿನ ಜಾವ ಮರಣ ಹೊಂದಿದ್ದಳು. ಆರೋಪಿತರು ನನ್ನ ಮಗಳನ್ನು ಅಪಹರಿಸಿ ಅವಳಿಗೆ 1 ನೇ ಆರೋಪಿಯನ್ನು ಮದುವೆ ಮಾಡಿಕೊಳ್ಳುವಂತೆ ಒತ್ತಾಯಿಸಿದ್ದರು ಇಲ್ಲದಿದ್ದಲ್ಲಿ ಮರಣ ಹೊಂದುವಂತೆ ಹೇಳಿದ್ದರು. ಆದ್ದರಿಂದ ನನ್ನ ಮಗಳು ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ಬಾತ್ ರೂಮಿನಲ್ಲಿ ಇದ್ದ ಕ್ಯಾನಿನಲ್ಲಿ ಸೀಮೆಎಣ್ಣೆ ಇಡಲಾಗಿತ್ತು. ಸಾಕ್ಷಿ ಗುರುತಿಸಿದ ಸೀಮೆ ಎಣ್ಣೆಯ ಡಬ್ಬಿ ಬೆಂಕಿ ಪೊಟ್ಟಣ ಮತ್ತು ಸುಟ್ಟ ಬಟ್ಟೆಯ ತುಂಡನ್ನು ಈಗಾಗಲೇ ಮುಮಾ-1 ರಿಂದ 3 ಎಂದು ಗುರುತಿಸಲಾಗಿವೆ.

5) ಮೇಲೆ ಹೇಳಿದ ಎಲ್ಲಾ ಸಂಗತಿಗಳ ಬಗ್ಗೆ ನಾನು ಪೊಲೀಸರ ಮುಂದೆ ಆಸ್ಪತ್ರೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದೇನೆ.

<u>ಪಾಟೀ ಸವಾಲು 2, 4  ಹಾಗೂ 5 ಪರವಾಗಿ  ಶ್ರೀ ಬಿ ವಿಬಿ ವಕೀಲರಿಂದಃ</u>

6) ಸಾಮಾನ್ಯವಾಗಿ ದೇವಸ್ಥಾನಕ್ಕೆ ಮುಂಜಾನೆ ಸ್ನಾನ ಮಾಡಿಕೊಂಡು ಹೋಗುತ್ತಾರೆ ಎಂದರೆ ಸರಿ. ನಾನು ಪೊಲೀಸರ ಮುಂದೆ ನನ್ನ ಮಗಳು ಆ ದಿವಸ ಪೆದ್ದಮ್ಮವ್ವ ದೇವಸ್ಥಾನಕ್ಕೆ ಮುಂಜಾನೆ 08 ಗಂಟೆಗೆ ಹೋಗಿದ್ದಳು ಎಂದು ಹೇಳಿ ಬರೆಸಿದ್ದೇನೆ. ನಾನು ಈ ರೀತಿ ಪೊಲೀಸರ ಮುಂದೆ ಹೇಳದೆ ಇದ್ದರು ಸಹ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮಗಳನ್ನು ಅಪಹರಣ ಮಾಡಿಕೊಂಡು ಹೋಗುವುದನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ.

7) ಆರೋಪಿತರು ನನ್ನ ಮಗಳನ್ನು ದೇವಸ್ಥಾನದ ಹತ್ತಿರದಿಂದ ಅಪಹರಣ ಮಾಡಿಕೊಂಡು ಹೋದರು ಎಂದು ನನಗೆ ಚಾಸಾ-6, 7 ಮತ್ತು 12 ರವರು ಹೇಳಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರುಗಳು ನನಗೆ ಸದರಿ ಸಂಗತಿಯನ್ನು ಪ್ರತ್ಯಕ್ಷವಾಗಿ ಹೇಳಿಲ್ಲ. ನನ್ನ ಗಂಡನಿಗೆ ಹೇಳಿದ್ದರು. ಸದರಿಯವರು ನನ್ನ ಗಂಡನಿಗೆ ಯಾವುದೇ ವಿಷಯವನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮನೆಯ ಹತ್ತಿರ ಬಂದು ಮೊಟಾರ್ ಸೈಕಲನ್ಲಿ ನನ್ನ ಮಗಳನ್ನು ಬಲವಂತವಾಗಿ ಅಪಹರಣ ಮಾಡಿಕೊಂಡು ಹೋಗಿದ್ದರು ಎಂದು ನಾನು ಪೊಲೀಸರ ಮುಂದೆ ಹೇಳಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ಆರೋಪಿತರು ನಮ್ಮ ಮನಗಳನ್ನು ಅಪಹರಣ ಮಾಡಿದ್ದರು ಎಂಬ ಸಂಗತಿ ಗೊತ್ತಾದ ನಂತರ ನಾನಾಗಲಿ ಅಥವಾ ನನ್ನ ಮನೆಯವರಾಗಲಿ ಆರೋಪಿತರ ಮನೆಗೆ ಹೋಗಿ ಘಟನೆ ಬಗ್ಗೆ ವಿಚಾರಿಸಿಲ್ಲ. ಆರೋಪಿತರ ತಂದೆ ತಾಯಿಯರ ಬಳಿ ಈ ಬಗ್ಗೆ ವಿಚಾರಿಸಿಲ್ಲ ಮತ್ತು ಅದೇ ದಿವಸ ಪೊಲೀಸರಿಗೆ ಯಾವುದೇ ದೂರನ್ನು ನೀಡಿಲ್ಲ.

8) ನನ್ನ ಮಗಳು ಮನೆಯಲ್ಲಿ ಇದ್ದ ಎರಡು ದಿವಸಗಳ ಸಮಯದಲ್ಲಿ ನಾವು ಆರೋಪಿತರನ್ನಾಗಲಿ ಅಥವಾ ಅವರ ಮನೆಯವರನ್ನಾಗಲಿ ಘಟನೆ ಬಗ್ಗೆ ವಿಚಾರಿಸಿಲ್ಲ. ಆರೋಪಿತರು ನನ್ನ ಮಗಳಿಗೆ 1 ನೇ ಆರೋಪಿಯನ್ನು ಮದುವೆಯಾಗಬೇಕು ಎಂದು ಒತ್ತಾಯಿಸಿದ್ದರು ಮತ್ತು ಮದುವೆ ಆಗದಿದ್ದಲ್ಲಿ ಸಾಯಬೇಕೆಂದು ಹೇಳಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮಗಳನ್ನು ಕರೆದುಕೊಂಡು ಹೋಗಿದ್ದರು ಎಂದು ಹೇಳಿದ ಸಮಯದಿಂದ ನನ್ನ ಮಗಳು ಆತ್ಮಹತ್ಯೆ ಮಾಡಿಕೊಳ್ಳುವವರೆಗೆ ಆರೋಪಿತರಾರು ನಮ್ಮ ಮನೆಗೆ ಬಂದಿಲ್ಲ ಮತ್ತು ನನ್ನ ಮಗಳ ಜೊತೆ ಮಾತುಕತೆ ಆಡಿಲ್ಲ.

9) ಆರೋಪಿತರು ನನ್ನ ಮಗಳನ್ನು ನಮ್ಮ ಮನೆಯ ಮುಂದೆ ವಾಹನದಲ್ಲಿ ಕರೆದುಕೂಂಡು ಬಂದು ಬಿಟ್ಟುಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮಗಳನ್ನು ಅಪಹರಣ ಮಾಡಿಲ್ಲ ಮತ್ತು ಮನೆಗೆ ಕರೆದುಕೊಂಡು ಬಿಟ್ಟು ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಾನು ಹೇಳಿದಂತೆ ನನ್ನ ಮಗಳಿಗೆ 1 ನೇ

ಆರೋಪಿಯನ್ನು ಮದುವೆ ಮಾಡಿಕೊಳ್ಳುವಂತೆ ಒತ್ತಾಯಿಸಿಲ್ಲ ಮತ್ತು ಅವಳಿಗೆ ಸಾಯುವಂತೆ ಪ್ರೇರೆಪಣೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಸಾವಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಆತ್ಮಹತ್ಯೆ ನಮ್ಮ ಮೇಲೆ ಬರುತ್ತದೆ ಎಂಬ ಕಾರಣದಿಂದಾಗಿ ನಾವು ಆರೋಪಿತರ ವಿರುದ್ಧ ಸುಳ್ಳು ಕೇಸನ್ನು ನೀಡಿದ್ದೇವೆ ಮತ್ತು ಅದಕ್ಕೆ ಅನುಗುಣವಾಗಿ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು **1** ಹಾಗು **3** ನೇ ಆರೋಪಿತರ ಪರವಾಗಿ ಶ್ರೀ ಎಮ್.ಎ.ಬಿ ವಕೀಲರಿಂದ</u>

**13)** ಆರೋಪಿತರು ನನ್ನ ಮಗಳನ್ನು ಅಪಹರಣ ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮಗಳನ್ನು ದಿನಾಂಕ **24.02.2024** ರಂದು ಅಪಹರಣ ಮಾಡಿಲ್ಲದೇ ಇರುವ ಕಾರಣದಿಂದಾಗಿ ಸದರಿ ದಿನದಿಂದ ದಿನಾಂಕ **27.02.2024** ರವರೆಗೆ ನಾವು ಆರೋಪಿತರ ವಿರುದ್ಧ ಯಾವುದೇ ಪೊಲೀಸ್ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ದಿನಾಂಕ **27.02.2024** ರಂದು ಸಂಜೆ ನನ್ನ ಮಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಸಮಯದಲ್ಲಿ ಪೊಲೀಸರು ಅಲ್ಲಿಗೆ ಬಂದಿದ್ದರು. ಆ ದಿವಸ ನನ್ನ ಮಗಳು ಪೊಲೀಸರ ಮುಂದೆ ಘಟನೆಯ ಬಗ್ಗೆ ಹೇಳಿದ್ದಳು. ಅದೇ ಸಮಯದಲ್ಲಿ ನಾವು ಪೊಲೀಸರಿಗೆ ಯಾವುದೇ ದೂರು ನೀಡಿಲ್ಲ. ನನ್ನ ಮಗಳ ಸಾವಿಗೆ ಆರೋಪಿತರು ಕಾರಣರಲ್ಲದಿದ್ದರು ಸಹ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೇಲಿನ ಪಾಟೀ ಸವಾಲಿನ ಜೊತೆ ಆರೋಪಿ **2, 4** ಮತ್ತು **5** ಪರ ಮಾಡಿದ ಪಾಟೀ ಸವಾಲನ್ನು ಸಹ ಅವಲಂಬಿಸಿಕೊಂಡಿರುತ್ತಾರೆ.

ಮರುವಿಚಾರಣೆಃ-

ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**C/c, 2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.